ತಿಳಿವು ಬಂದ ಕೂಡಲೇ ನಿರೀಕ್ಷಿಸಿದ್ದ ಹಿರಿಯ ಲತಾ, ವೀಣಾ ಹಾಗೂ ಕಿರಿಯ ಗೀತಾ ಮತ್ತು ಇವರ ಗಂಡಂದಿರನ್ನು ಕಾಣದೆ ಕಸಿವಿಸಿಯಾಗಿತ್ತು ಅವರಿಗೆ. ಮೂರನೇ ಅಳಿಯ ಶ್ರೀನಿವಾಸನ ಯೋಗಕ್ಷೇಮದ ಪ್ರಶ್ನೆಗಳಿಗೆ ಚುಟುಕಾಗಿ ಉತ್ತರಿಸಿ ನಿದ್ದೆ ಬಂದಂತೆ ಮಲಗಿಕೊಂಡದ್ದು ಶ್ರೀನಿವಾಸನಿಗೆ ಅರ್ಥವಾಗದಿದ್ದರೂ ರೋಹಿಣಿಗೆ ತಿಳಿಯಿತು. ಕಣ್ಣು ತೇವವಾಯಿತು. ತಾಯಿಯಿಂದ ಮನೆಯ ಪರಿಸ್ಥಿತಿಯ ಅರಿವಾಗಿತ್ತು, ಅವಳಿಗೆ. ಗೀತಳ ಮದುವೆಗಾಗಿ ಮನೆಯನ್ನು ಅಡವಿಟ್ಟು ಸಾಲ ಮಾಡಿದ್ದರು. ಅದೀಗ ಬಡ್ಡಿ ಸೇರಿ ಲಕ್ಷಕ್ಕೆ ಹತ್ತಿರ ಬಂದಿತ್ತು. ತಾನು ಸತ್ತರೆ ಹೆಂಡತಿಗೆ ಮನೆಯೂ ಇಲ್ಲವಾಗಿಬಿಟ್ಟರೆ ಎಂಬ ಚಿಂತೆ ಅವರನ್ನು ಕಾಡುತ್ತಿತ್ತು. ಗಂಡುಮಕ್ಕಳಿಲ್ಲದ ಅವರಿಗೆ ಈಗ ಅಳಿಯಂದಿರೇ ದಿಕ್ಕು. ಹಿರಿಯ ಅಳಿಯಂದಿರಿಬ್ಬರು ಹಾಗೂ ವಾಸುದೇವ ಈ ಮೂವರಲ್ಲೇ ಅವರ ಭರವಸೆ. ಶ್ರೀನಿವಾಸನ ಬಗ್ಗೆ ಹೇಳುವುದೇನಿದೆ. ಕೈ ಬಿಗಿ ಇರುವ ಅಳಿಯ. ಹೇಳಿ, ಕೇಳಿ ತಾನೇ ಏನು ಪ್ರಯೋಜನ? ತಂದೆಯ ಮನಸ್ಸು ಅರಿತು ರೋಹಿಣಿ ನೀರವವಾಗಿ ರೋಧಿಸಿದಳು.

ಮಧ್ಯಾಹ್ನದ ವೇಳೆಗೆ ಅಕ್ಕಂದಿರು, ಗೀತ ಎಲ್ಲರೂ ಬಂದರು. ಒಂದು ದಿನ ತಡವಾದುದಕ್ಕೆ ಅವರಿಗೆ ಹೇಳಲು ಬಹಳ ಕಾರಣಗಳಿದ್ದವು. ದಿಂಬಿಗೆ ಒರಗಿ ಕುಳಿತಿದ್ದ ಶ್ರೀಪತಿರಾಯರಿಗೆ ಅವರನ್ನೆಲ್ಲ ಕಂಡು ಬಹಳ ಆನಂದವಾಯಿತು. ಲತಾ, ವೀಣಾ, ಗೀತ ಮೂವರೂ ತಂದೆಯ ಅಕ್ಕಪಕ್ಕ ಕುಳಿತರು. ಮೂವರು ಅಳಿಯಂದಿರು ಎದುರಿಗೆ ಕುರ್ಚಿಗಳಲ್ಲಿ ಕುಳಿತರು. ಶ್ರೀಪತಿರಾಯರು ಬಹಳ ಆಯಾಸದಿಂದಲೇ ತಮ್ಮ ಅನಾರೋಗ್ಯದ ಬಗ್ಗೆ ಹೇಳಿದರು. ತಾವು ಸತ್ತರೆ ಹೆಂಡತಿಗೆ ಗತಿಯಾರು ಎಂಬ ತಮ್ಮ ಚಿಂತೆಯ ಬಗ್ಗೆ ಅಳಿಯಂದಿರಲ್ಲಿ ತೋಡಿಕೊಂಡರು. ಸಾಲದ ವಿಚಾರವೂ ಬಂದಿತು. ತನ್ನ ಮದುವೆಗೆ ಮಾಡಿದ್ದ ಸಾಲ ಎಂಬ ಮಾತು ಕೇಳಿದ ಕೂಡಲೇ ಗೀತ ಮುಖವನ್ನು ಹುಳ್ಳಗೆ ಮಾಡಿಕೊಂಡಳು. ಮಾವನವರ ಮಾತು ಮುಗಿದ ಮೇಲೆ ಹಿರಿಯ ಅಳಿಯ ನಾಗರಾಜ ಹೇಳಿದ: 'ಯೋಚನೆ ಮಾಡಬೇಡಿ. ಎಲ್ಲ ಸರಿಯಾಗುತ್ತೆ. ನಾಲ್ಕು ಹೆಣ್ಣುಮಕ್ಕಳಿದ್ದಾರೆ. ನಿಮಗೇಕೆ ಚಿಂತೆ?' ರೋಹಿಣಿಗೆ ಕಸಿವಿಸಿಯಾಯಿತು. ಕುಸಿಯುತ್ತಿರುವ ಅಪ್ಪನಿಗೆ ಇದು ಸಾಂತ್ವನದ ಮಾತೇ? ಎಂದುಕೊಂಡಳು. ಅಪ್ಪನಿಗೂ ಅಳಿಯನ ಮಾತು ಸರಿ ಕಾಣಲಿಲ್ಲ ಎಂಬುದು ಅವಳಿಗೆ ಅರಿವಾಯಿತು. ತನ್ನ ಗಂಡನ ಸ್ವಭಾವಕ್ಕೆ ಈ ಭರವಸೆಯ ನುಡಿಗಳು ಹೊಂದುತ್ತವೆಯೇ ಎಂಬ ಪ್ರಶ್ನೆ ಮನಸ್ಸಿನಲ್ಲಿ ಮೂಡಿತು. ಅದನ್ನು ಅಳಿಸಿಹಾಕುವಂತೆ ಬೇರೆಯೇ ಯೋಚನೆ ತೊಡಗಿತು. 'ನಿಮಗೇನೂ ಆಗೊಲ್ಲ, ಅತ್ತೆಯವರನ್ನು ನೀವೇ ನೋಡಿಕೊಳ್ಳುತ್ತೀರಿ, ನಿಮಗೆ ಬೇಗ ಹುಶಾರಾಗುತ್ತೆ' ಎಂಬ ಸಮಾಧಾನದ ನುಡಿಗಳನ್ನು ಹೇಳದೆ ಭಾವ ಹೀಗೇಕೆ ಹೇಳಿದರು? ಪ್ರಶ್ನೆಗೆ ಉತ್ತರ ಸಿಗಲಿಲ್ಲ. ನಿಧಾನವಾಗಿ ಎದ್ದು ಹೊರಗೆ ಬಂದಳು. ಶ್ರೀನಿವಾಸ ಎಲ್ಲೂ ಕಾಣಲಿಲ್ಲ. ಮಕ್ಕಳಿಗೆ ತಲೆ ಬಾಚಿ ಆಡಲು ಕಳುಹಿಸಿದಳು.

ಸಂಜೆ ಹೊರಗಿನ ಅಂಗಳದಲ್ಲಿ ಅಕ್ಕಂದಿರು, ಭಾವಂದಿರು ಗೀತ, ವಾಸುದೇವ ಎಲ್ಲರೂ ಕಲೆತರು. ತಗ್ಗಿನ ದನಿಯಲ್ಲಿ ಅವರು ಆಡುತ್ತಿದ್ದ ಮಾತು ರೋಹಿಣಿಯ ಕಿವಿಗೂ ಬಿತ್ತು. ಮಾತಿನ ನಡುವೆ ಲತಾ ಹೇಳಿದಳು: 'ಶ್ರೀನಿವಾಸ ಖರ್ಚು ಕಡಿಮೆ ಮಾಡ್ತಾರೆ, ಕೈಬಿಗಿ ಮಾಡ್ತಾರೆ ಅಂತ ರೋಹಿಣಿ ಅಮ್ಮನ ಜವಾಬ್ದಾರಿಯಿಂದ ಕಳಚಿಕೊಳ್ಳೋದು ಯಾವ ನ್ಯಾಯ? ಜೊತೆಗೆ ಸಾಲ ಬೇರೆ.'

ಎಲ್ಲರ ಮಾತು ಕಿವಿಗೆ ಬಿದ್ದರೂ ಉತ್ತರ ಹೇಳಲಾಗದೆ ಯಾವ ಭರವಸೆಯನ್ನೂ ಕೊಡಲಾರದೆ ಕಲ್ಲಿನಂತೆ ಕುಳಿತಿದ್ದಳು, ರೋಹಿಣಿ. ಒಳಗಡೆ ರೋಗಿಯ ಕೋಣೆಯಲ್ಲಿ